ಮಾಡಿದ್ದಾರೆ. ಮಾನ್ಯ ಹಿರಿಯ ಸದಸ್ಯರಾದ ಮಾಧುಸ್ವಾಮಿಯವರು ತುಮಕೂರು ಜಿಲ್ಲೆಯ ಬಗ್ಗೆ ನಮ್ಮ ಗಮನಕ್ಕೆ ತಂದಿದ್ದಾರೆ, ಅಲ್ಲಿಯ ಬಗ್ಗೆ ತೀವ್ರವಾದ ಗಮನವನ್ನು ಹರಿಸಿ ಆದಷ್ಟು ಬೇಗನೆ ಅದನ್ನು ರಿಪೇರಿ ಮಾಡುವಂಥದ್ದು, ಮತ್ತು ಅದನ್ನು ಸುಗಮಗೊಳಿಸುವಂತಹ ಭರವಸೆಯನ್ನು ನಾನು ತಮಗೆ ಕೊಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನೀವು ಹೋಬಳಿ ಕೇಂದ್ರಕ್ಕೆ ಒಂದೊಂದು ಕಿಯೋಸ್ಕ್ ಮಂಜೂರು ಮಾಡುತ್ತೇವೆಂದು ಹೇಳಿದಿರಿ. ನಮಗೆ ಗೊತ್ತಿರುವ ಪ್ರಕಾರ ದಕ್ಷಿಣ ಕರ್ನಾಟಕದಲ್ಲಿ ಹೋಬಳಿ ಕೇಂದ್ರಗಳು ಬಹಳ ಇವೆ. ಉತ್ತರ ಕರ್ನಾಟಕದಲ್ಲಿ ಹೋಬಳಿ ಕೇಂದ್ರ ಬಹಳ ಕಡಿಮೆ. ಅದೇನು ಅಡ್ಮಿನಿಸ್ಟೇಟಿವ್ ಯೂನಿಟ್ಟೂ ಅಲ್ಲ. ಅಲ್ಲಿ ಏಕೆ ಇಂತಹ ಕೇಂದ್ರಗಳನ್ನು ಮಾಡಬೇಕೆಂದು ಹೇಳುತ್ತೀರಿ? ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ ಆದರೂ ಮಾಡಿ. ಇಲ್ಲ ಐದು ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವಂತಹ ದೊಡ್ಡ ದೊಡ್ಡ ಹಳ್ಳಿಗಳು ಏನಿವೆ, ಆ ಎಲ್ಲಾ ಹಳ್ಳಿಗಳಿಗೆ ಕೊಟ್ಟರೆ ಈ ತಾರತಮ್ಯ ಹೋಗಲಾಡಿಸುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲವೆಂದರೆ, ಹೋಬಳಿ ಕೇಂದ್ರಕ್ಕೆ ಒಂದರಂತೆ ಹೇಳಿದರೆ ಇಲ್ಲಿ ಹೆಚ್ಚಿಗೆ ಆಗುತ್ತವೆ, ನಮ್ಮ ಕಡೆ ಕಡಿಮೆ ಆಗುತ್ತವೆ. ಅದರಿಂದ ನಮ್ಮ ಜನರಿಗೆ ಬಹಳ ಅನಾನುಕೂಲವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾವೇನು ಗೈಡ್‌ಲೈನ್ಸ್ ಹಾಕಿಕೊಂಡಿದ್ದೇವೆ, ಹೋಬಳಿ ಕೇಂದ್ರಕ್ಕೆ ಇದನ್ನು ವಿಸ್ತರಿಸುವಂಥದ್ದು, ಆ ನಿಯಮವನ್ನು ಅಷ್ಟಕ್ಕೇ ನಾವು ರಿಸ್ಟ್ರಿಕ್ಷನ್ ಹಾಕಿಕೊಂಡಿಲ್ಲ. ನಾಳೆ ಎಲ್ಲೆಲ್ಲಿ ಅವಶ್ಯಕತೆ ಇದೆ, ನಾಳೆ ಮಾನ್ಯ ಡಿ.ಆರ್. ಪಾಟೀಲ್‌ರವರು ಹೇಳಿದ ಪ್ರಕಾರ ಎಲ್ಲೊ ಒಂದು ದೊಡ್ಡ ಗ್ರಾಮ ಇದೆ, ಆ ಅಕ್ಕಪಕ್ಕದ ಗ್ರಾಮಗಳಿಗೆ ಆ ಗ್ರಾಮಕ್ಕೆ ಹೋದರೆ ಅನುಕೂಲವಾಗುತ್ತದೆ ಎನ್ನುವಂಥದ್ದು ಮಾಹಿತಿ ತೆಗೆದುಕೊಂಡು ಬೇರೆ ಬೇರೆ ದೊಡ್ಡ ಗ್ರಾಮಗಳಿಗೂ ಅದನ್ನು ವಿಸ್ತರಣೆ ಮಾಡುವಂಥ ಆಲೋಚನೆ ಕೂಡ ಇದೆ. ಕೇವಲ 800 ಹೋಬಳಿ ಕೇಂದ್ರಗಳನ್ನೆಷ್ಟೇ ರಿಸ್ಟ್ರಿಕ್ಷನ್ ಮಾಡಿಕೊಂಡಿಲ್ಲ. ಕೇವಲ ಹೋಬಳಿ ಎನ್ನುವುದೂ ರಿಸ್ಟ್ರಿಕ್ಷನ್ ಮಾಡಿಕೊಂಡಿಲ್ಲ. ಹಾಗಾಗಿ ಇದನ್ನು ಮತ್ತೆ ವಿಸ್ತರಿಸಿ ಮಾಡುವುದಕ್ಕೂ ನಾವು ನಿಯಮವನ್ನು ಸಡಿಲಗೊಳಿಸುತ್ತೇವೆ. ಆ ಹೋಬಳಿ ಕೇಂದ್ರಗಳಲ್ಲಿಯೂ ಕೂಡ ನಾವು ಮಾಡುತ್ತೇವೆ.

ಗೋಮಾಳಗಳ ಸಾಗುವಳಿಯನ್ನು ಸಕ್ರಮಗೊಳಿಸಲು ಸಾಧ್ಯವಾಗದಿರುವುದು

131 (525): ಶ್ರೀ ಕುಮಾರ್ ಬಂಗಾರಪ್ಪ. ಎಸ್. (ಸೊರಬ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರದ ಆದೇಶದಿಂದಾಗಿ ಗೋಮಾಳಗಳ ಸಾಗುವಳಿಯನ್ನು ಸಕ್ರಮಗೊಳಿಸಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು;

ಇ) ಕಿಯೋಕ್ಸ್ ಯೋಜನೆಯಡಿಯಲ್ಲಿ (ಪಾಣಿ–ಆರ್.ಟಿ.ಸಿ.) ವಿತರಣಾ ಕಾರ್ಯಕ್ರಮವನ್ನು ಹೋಬಳಿ ಹಾಗೂ ಗ್ರಾಮ ಪಮಚಾಯತ್ ಹಂತಕ್ಕೆ ಯಾವಾಗ ವಿತರಿಸಲಾಗುವುದು.

ಈ) ಕಂದಾಯ ಇಲಾಖೆಯಲ್ಲಿ ಕಾರ್ಯದ ಒತ್ತಡಕ್ಕನುಗುಣವಾಗಿ ಹುದ್ದೆಗಳನ್ನು ಸೃಷ್ಟಿಸಲಾಗುತ್ತಿದೆಯೇ:

ಉ) ಸೃಷ್ಟಿಸಿದ್ದಲ್ಲಿ ಅವುಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಹೌದು.

ಆ) ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂ. 14048/05ಕ್ಕೆ ಸಂಬಂಧಿಸಿದಂತೆ ದಿ:22.09.2005 ರಂದು ನೀಡಿರುವ ತೀರ್ಪಿನಲ್ಲಿ ಗೋಮಾಳ ಜಮೀನುಗಳನ್ನು ಮಂಜೂರು ಮಾಡಬಾರದೆಂದು ಆದೇಶಿಸಿದೆ. ಅದರಂತೆ ನ್ಯಾಯಾಲಯದ ಆದೇಶವನ್ನು ಪಾಲಿಸಲಾಗುತ್ತಿದೆ.

ಇ) ಗಣಕೀಕೃತ ಪಹಣಿಗಳನ್ನು ಹೋಬಳಿ ಮಟ್ಟದಲ್ಲಿ ವಿತರಿಸುವ ಯೋಜನೆಯನ್ನು ಮುಂದಿನ ಮೂರು ತಿಂಗಳಲ್ಲಿ ಹಂತ ಹಂತವಾಗಿ ಪ್ರಾರಂಭಿಸಲಾಗುವುದು.

ಈ) ಇತ್ತೀಚಿಗೆ ರಾಜ್ಯದಲ್ಲಿರುವ 4 ಕಂದಾಯ ವಿಭಾಗಗಳಿಗೆ 4 ಪ್ರಾದೇಶಿಕ ಆಯುಕ್ತರ ಕಛೇರಿಗಳನ್ನು ಅಗತ್ಯ ಸಿಬ್ಬಂದಿಗಳೊಂದಿಗೆ ಸೃಜಿಸಲಾಗಿದೆ.

ಉ) ಈ ಕಛೇರಿಗಳಿಗೆ ಸೃಷ್ಟಿಸಿರುವ ಅಗತ್ಯ ಸಿಬ್ಬಂದಿಗಳನ್ನು ರಿಡಿಪ್ಲಾಯಿಮೆಂಟ್ ಮೂಲಕ ಭರ್ತಿ ಮಾಡಲು ಆಧ್ಯತೆಯ ಮೇಲೆ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಎಸ್. ಕುಮಾರ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗಳಲ್ಲಿ ಮೂರು ಪ್ರಶ್ನೆಗಳಿಗೆ ತಾವು ಒಪ್ಪಿಗೆ ಸೂಚಿಸಿದ್ದೀರಿ. ಅದರಲ್ಲಿ ಪ್ರಮುಖವಾಗಿರತಕ್ಕಂತಹ ಪ್ರಶ್ನೆ, ಈಗ ಏನು ಬಗರ್ ಹುಕುಂ ಸಾಗುವಳಿ ಬಗ್ಗೆ ಸಾಕಷ್ಟು ಚರ್ಚೆಯಾಯಿತು. ಬಗರ್ ಹುಕುಂ ಬಗ್ಗೆ ಮೊದಲನೇ ಪ್ರಶ್ನೆಯಲ್ಲಿ ಏನು ಚರ್ಚೆಯಾಯಿತು ಹೈಕೋರ್ಟ್‌ನ ಒಂದು ಜಡ್ಜ್‌ಮೆಂಟ್ ಮೇಲೆ, ಗೋಮಾಳ ಮತ್ತು ಬಗರ್ ಹುಕುಂಗಳಿಗೆ ಕಂಪ್ಲೀಟಾಗಿ ಸ್ಟೇ ಬಂದಿದೆ. ನೀವು ಬಗರ್ ಹುಕುಂ ಸಮಿತಿ ಮಾಡುತ್ತೇವೆಂದು ಏನು ಹೇಳುತ್ತಿದ್ದೀರಿ, ಇದರ ಮೇಲೆಯೇ ಸ್ಟೇ ಬಂದಿದೆ. ಮಾನ್ಯ ಸಚಿವರು ಈಗ ಉತ್ತರ ಕೊಡುತ್ತಾ, ನಾವು ಬಗರ್ ಹುಕುಂ ಸಮಿತಿಗಳಿಗೆ ನಾವು ಇನ್ನು ಹದಿನೈದು ದಿನಗಳಲ್ಲಿ ಒಪ್ಪಿಗೆ ಕೊಡುತ್ತಿದ್ದೇವೆ. ಬಗರ್ ಹುಕುಂ ಸಮಿತಿಗಳು ಇವೆಲ್ಲವುಗಳನ್ನೂ ಸಕ್ರಮಗೊಳಿಸುತ್ತವೆ ಎನ್ನತಕ್ಕಂತಹ ಮಾತನ್ನು ಆಡಿದರು. 22.9.2005 ರಲ್ಲಿ ಹೈಕೋರ್ಟ್ ಜಡ್ಜ್‌ಮೆಂಟ್ ಬಂದ ಮೇಲೆ ಎಲ್ಲಾ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಎಲ್ಲಾ ಬಗರ್ ಹುಕುಂ ಸಮಿತಿಗಳು ಯಾವುದೇ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ, ನೀವು ಜಡ್ಜ್‌ಮೆಂಟ್ ಕಾಪಿ ನೋಡಿದ್ದೀರೋ ಇಲ್ಲವೋ ಗೊತ್ತಿಲ್ಲ. ನೋಡಿದರೆ ನಮಗೆ ಸಮತೋಷ. ಅದರಲ್ಲಿ ಮನೆ ಕೊಡುವುದಕ್ಕೆ ಕೂಡ

ಅವಕಾಶ ಇಲ್ಲ? ಯಾವುದೇ ಗೋಮಾಳಗಳು ಮಂಜೂರಾತಿ ಇಲ್ಲದೆ ಬಗರ್ ಹುಕುಂ ಮಾಡುತ್ತಿದ್ದರೆ ಅದಕ್ಕೂ ಅವಕಾಶವಿಲ್ಲ. ಎಲ್ಲಾ ತರಹದ ರಿಸ್ಟ್ರಿಕ್ಷನ್ಸ್ ಥ್ರೂ ಔಟ್ ಕರ್ನಾಟಕ ಕೊಟ್ಟಿದೆ. ಈಗ ನೀವು 15 ದಿನಗಳಲ್ಲಿ ಬಗರ್ ಹುಕುಂ ಸಮಿತಿ ಮಾಡುತ್ತೇವೆನ್ನುವುದಾದರೆ ಕೋರ್ಟ್ ವರ್ಡಿಕ್ಟ್ ವಯಲೇಟ್ ಮಾಡಿದ ಹಾಗಾಗುತ್ತದೆ. ಈಗ ನೀವು ಕ್ಲಿಯರ್ ಕಟ್ಟಾಗಿ ಡಿಸ್ಟಿಂಕ್ಷನ್ ಮಾಡಬೇಕು, ಏಕೆಂದರೆ, ಹಳೆಯವು ಯಾವುವು ಸಾಗುವಳಿ ಚೀಟಿಗಳು ಮಂಜೂರಾತಿ ಆರಿದ್ದವು, ಅದಕ್ಕೆ ಮಾತ್ರ ನೀವು ಸಾಗುವಳಿ ಪತ್ರ ಕೊಡುವುದಕ್ಕೆ ನಿಮಗೆ ಅವಕಾಶ ಆಗುತ್ತದೆಯೇ ಹೊರತು, ಬೇರೆ ರೀತಿಯಲ್ಲಿ ಇದು ಅವಕಾಶವಾಗುವುದಿಲ್ಲ. ಸರ್ಕಾರ ಮೇಲ್ಮನವಿ ಹಾಕಿಕೊಂಡು ಇದನ್ನು ಕ್ವಾಷ್ ಮಾಡುವುದಕ್ಕೆ ಒಂದು ಅಪೀಲ್ ಆದರೂ ಹೋಗಬೇಕಾಗುತ್ತದೆ. ಇಲ್ಲದಿದ್ದರೆ ಯಾವ ಸಮಿತಿಗಳು ಬಂದರೂ ಕೂಡ ಈ ಆರ್ಡರ್ಸ್ ಮೇಲೆ, ಯಾವುದೋ ಒಂದು ಕೇಸ್ ಮೇಲೆ ಇದು ಹೈಕೋರ್ಟ್‌ಗೆ ರೀಚ್ ಆಯಿತು. ಪರ್ಟಿಕ್ಯುಲರ್ ಕೇಸ್‌ಗೆ ಸೀಮಿತವಾಗಿ ಜಡ್ಜ್‌ಮೆಂಟ್‌ಗೆ ಏನು ಹೆಳಬೇಕೋ ಅದನ್ನು ಹೇಳದೆ, ಎಂಟೈರ್ ಕರ್ನಾಟಕಕ್ಕೆ ಜಡ್ಜ್‌ಮೆಂಟ್ ಮಾಡಿದ್ದಾರೆ. ದಯಮಾಡಿ ನಾನು ಮಾನ್ಯ ಕಂದಾಯ ಸಚಿವರಿಗೆ ಹಾಗೂ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ, ಈ ಜಡ್ಜ್‌ಮೆಂಟ್ ಕೊಟ್ಟ ಗೋಮಾಳಗಳ ಮೇಲೆ ಏನು ರಿಸ್ಟ್ರಿಕ್ಷನ್ಸ್ ಹಾಕಿದ್ದಾರೆ, ಇದು ತಲೆತಲಾಂತರಗಳಿಂದ ಬಂದಿದೆ. ಎಲ್ಲೆಲ್ಲಿ ಗೋಮಾಳ ಮಾಡತಕ್ಕಂಥದ್ದು ಇದೆ, ಅಲ್ಲಿ ವ್ಯತ್ಯಾಸಗಳಿವೆ. ಅಲ್ಲಿ ಎಐಎಫ್‌ಸಿ ಮಾಡುವುದಾಗಲಿ ಅಥವಾ ಗೋಮಾಳ ಊರು ಸಮಿತಿ ಮಾಡುವುದಾಗಲಿ ಇದು ಮಾಡಿಕೊಂಡು ತೀರ್ಮಾನ ಮಾಡಬೇಕೇ ಹೊರತು, ಈ ಪ್ರಕಾರವಾಗಿ ನೀವು ಬಗರ್ ಹುಕುಂ ಸಮಿತಿ ಮಾಡಿಕೊಂಡು ಕೆಲಸ ಮಾಡುವುದಕ್ಕಾಗುವುದಿಲ್ಲ. ದಯಮಾಡಿ ಕಂದಾಯ ಸಚಿವರು ಇದಕ್ಕೆ ಉತ್ತರ ಕೊಡಬೇಕು. Kiosk ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇನ್ನು 800 ಕೇಂದ್ರಗಳನ್ನು ಮಾಡಬೇಕೆನ್ನುವಂತಹ ಮಾತನ್ನು ತಾವು ಈಗ ತಾನೇ ಹೇಳಿದ್ದೀರಿ. ಆಯಾ ಹೋಬಳಿವಾರು ನೀವು ಟಿಸಿ ಮತ್ತು ಪಹಣಿ ತೆಗೆಯುವುದಕ್ಕೆ ಅವಕಾಶ ಮಾಡಿಕೊಡುತ್ತೀರೋ, ಅಥವಾ ಇಡೀ ತಾಲ್ಲೂಕಿನ ಸಂಪೂರ್ಣ ಮಾಹಿತಿಯನ್ನು ಆ ಗಣಕೀಕೃತ ಕೇಂದ್ರದಲ್ಲಿ ಇಡುತ್ತೀರೊ ಹೇಗೆ? ಏಕೆಂದರೆ, ಅಲ್ಲಿಂದ ಇಲ್ಲಿಗೆ ಬರುತ್ತದೆ, ಇಲ್ಲಿಂದ ಅಲ್ಲಿಗೆ ಹೋಗುತ್ತದೆ. ಮನೆ ತಾಲ್ಲೂಕಿನಲ್ಲಿ ಎಲ್ಲಿಯೇ ಇರಬಹುದು. ಆ ನಿಟ್ಟಿನಲ್ಲಿ ಈಗ ಮಾಧುಸ್ವಾಮಿಯವರು ಮಾತನಾಡುತ್ತಾ ಓವರ್ ಲೋಡ್ ಆಗಿದೆ ಎಂದು ಹೇಳಿದರು. ಈಗ ಎಂಟೈರ್ ಮಾಹಿತಿಯನ್ನು ಹೋಬಳಿವಾರು ತೆಗೆದುಕೊಂಡು ಹೋಗಿ ಅಲ್ಲಿಯೂ ಓವರ್ ಲೋಡ್ ಮಾಡುವುದಕ್ಕಾಗುವುದಿಲ್ಲ. ಸಾಫ್ಟ್‌ವೇರ್‌ನಲ್ಲಿ ಏನು ಮಾಡುತ್ತೀರಿ ಎಂದು ಅದರ ಬಗ್ಗೆ ಕೂಡ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ನಮ್ಮ ಅರಣ್ಯ ಸಚಿವರು.....

ಅಧ್ಯಕ್ಷರು : ಬೇಗ ಮುಗಿಸಿ. I have to complete its

ಶ್ರೀ ಎಸ್. ಕುಮಾರ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ನೀವು ಮೂರು ಪ್ರಶ್ನೆಗಳನ್ನು ಒಂದರಲ್ಲಿ ಅಡ್ಜಸ್ಟ್ ಮಡಿ ಅವಕಾಶ ಕೊಟ್ಟಿದ್ದೀರಿ. ಮಾನ್ಯ ನಮ್ಮ ಅರಣ್ಯ ಸಚಿವರು ಮಾತನಾಡುವಾಗ ಎಲ್ಲಾದರೂ ನಿಮ್ಮ ಬಳಿ ಮಾಹಿತಿ ಇದ್ದರೆ, ಅದನ್ನು ಕೊಡಿ ಎನ್ನತಕ್ಕಂತಹ ಮಾತನ್ನು ಎಸ್.ಎಸ್.

ಪಾಟೀಲರು ಕೇಳಿದ ಪ್ರಶ್ನೆಗೆ ಹೀಗೆ ಹೇಳಿದರು. ಅದಕ್ಕೆ ಪೂರಕವಾದ ಪ್ರಶ್ನೆ ಇರುವುದರಿಂದ ನಾನು ಮಾಹಿತಿಯನ್ನು ಅರಣ್ಯ ಸಚಿವರಿಗೆ ಕೊಡುತ್ತಿದ್ದೇನೆ. 1,7,664.71 ಸ್ಕ್ವೇರ್ ಕಿ.ಮೀ. ಫಾರೆಸ್ಟ್ ಏರಿಯಾ ಎನ್‌ಕ್ರೋಚ್ ಆಗಿದೆ. ಫಾರೆಸ್ಟ್ ಏರಿಯಾ ಎನ್‌ಕ್ರೋಚ್ ಆಗಿದೆ ಎಂದರೆ according to the geographical condition of India along 19.96% of the forest area has been completely destroyed. This is the information. Subsequently. ಆ ಪ್ರಶ್ನೆಗೆ ನಾನು ಕಂದಾಯ ಸಚಿವರಿಗೆ ಕೇಳುತ್ತೇನೆ, ಯಾವ ವಿಭಾಗವನ್ನೂ ಮಾಡುತ್ತೀರಿ, ಹೇಗೆ ಹುದ್ದೆಗಳನ್ನು ಕೊಡುತ್ತೀರಿ ಅಂತ ಎಲ್ಲಿ ನಮಗೆ ವಿಐಎಸ್ ಇಲ್ಲ, ಸರ್ವೇ ಮಾಡುವುದಕ್ಕೆ ಆಗಿಲ್ಲ. 25 ವರ್ಷದ ಹಿಂದೆ ಸರ್ವೇ ಆಗಿದ್ದು ಬಿಟ್ಟರೆ ಇಲ್ಲಿಯವರೆಗೆ ಯಾವ ಸರ್ವೇ ಕೂಡ ಆಗಿಲ್ಲ. ಬಗರ್ ಹುಕುಂನಲ್ಲಿ ಪೋಡಿ ಹಾಕುವುದಕ್ಕಾಗಲಿ, ಸಾಗುವಳಿ ಚೀಟಿ ಕೊಡುವುದಕ್ಕಾಗಲಿ ಕೊಡುವುದಕ್ಕಾಗುವುದಿಲ್ಲ. ದಯಮಾಡಿ ಸಚಿವರು ಇದಕ್ಕೂ ಉತ್ತರ ನೀಡಬೇಕೆಂದು ಏನಂತಿ ಮಾಡುತ್ತೇನೆ.

ಶ್ರೀ ಬಿ. ಶಿವರಾಂ : ಮಾನ್ಯ ಅಧ್ಯಕ್ಷರೆ, ಗೋಮಾಳದ ಬಗ್ಗೆ ಹೈಕೋರ್ಟ್ ಆದೇಶ ಏನು ಬಂದಿದೆ ಎಂಬುದನ್ನು ಸ್ಪಷ್ಟವಾಗಿ ಹೇಳಿದರು. ಅದೇ ರೀತಿ ಈ ಹಿಂದೆ ಅಮೃತ್ ಕಾವಲ್ ಭೂಮಿ ಕೂಡ ಅನಧಿಕೃತವಾಗಿ ಎಲ್ಲಿ ಸಾಗುವಳಿ ಆಗಿತ್ತು ಅದನ್ನು ಸಕ್ರಮೀಕರಣಗೊಳಿಸತಕ್ಕಂಥದಕ್ಕೆ ಅವಕಾಶವನ್ನು ಕಲ್ಪಿಸಿದ್ದರು. ಆದರೆ ಈಗ ಗೋಮಾಳ ಭೂಮಿಗೆ ಏನು ಆದೇಶ ಬಂದಿದೆ, ಅದೇ ರೀತಿ ಅಮೃತ್ ಕಾವಲ್ ಭೂಮಿಗೂ ಕೂಡ ಬಂದಿದೆ. ಇವರು ಏನು ಅಂಕಿಸಂಖ್ಯೆಗಳನ್ನು ಕೊಟ್ಟಿದ್ದಾರೆ, ಅದರಲ್ಲಿ ಗೊಮಾಳ ಮತ್ತು ಅಮೃತ್‌ಕಾವಲ್ ಭೂಮಿಗಳ ಅರ್ಜಿಗಳೇ ಹೆಚ್ಚು. ಇವೆರಡಕ್ಕೂ ತಡೆ ಬಂದಿದೆ ಎಂದರೆ, ಸಮಿತಿ ಮಾಡಿದರೂ ಕೂಡ ಸಕ್ರಮೀಕರಣಗೊಳಿಸತಕ್ಕಂತಹ ಪ್ರಶ್ನೆ ಉದ್ಭವಿಸುವುದಿಲ್ಲ. ಇನ್ನು ಅರಣ್ಯ ಭೂಮಿ ಪ್ರಶ್ನೆ ಇಲ್ಲವೇ ಇಲ್ಲ. ಆದ್ದರಿಂದ ಇವೆರಡಕ್ಕೂ ಕೂಡ ಹೈಕೋರ್ಟ್‌ನಿಂದ ಏನು ಆದೇಶ ಬಂದಿದೆ, ಅದನ್ನು ತೆರವುಗೊಳಿಸತಕ್ಕಂತಹ ಕೆಲಸ ಮಾಡುವುದು ಮೊದಲನೆಯದು. ಎರಡನೆಯದು ನಿಮ್ಮ ಸಮಿತಿ ಮಾಡಿದರೆ ಮಾತ್ರ ಉದ್ದೇಶ ಈಡೇರುತ್ತದೆಯೇ ಹೊರತು, ಇಲ್ಲದಿದ್ದರೆ ಅದು ಉಪಯೋಗಕ್ಕೆ ಬರುವುದಿಲ್ಲ, ದಯಮಾಡಿ ತಾವು ಅದನ್ನು ಕ್ಲಾರಿಫೈ ಮಾಡಬೇಕು.

ಶ್ರೀ ಹೆಚ್. ನಿಂಗಪ್ಪ : ಮಾನ್ಯ ಅಧ್ಯಕ್ಷರೆ, ಈಗ ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸುವುದಕ್ಕೆ ಸಮಿತಿಯನ್ನು ಮಾಡಿದರೆ ಮಾನ್ಯ ಸದಸ್ಯರು ಹೇಳಿದ ಹಾಗೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈಗೇನು ಹೈಕೋರ್ಟ್‌ನಲ್ಲಿ ರಿಟ್ ಪಿಟಿಶನ್ ಮೇಲೆ ತೀರ್ಮಾನ ಕೊಡಲಾಗಿದೆಯೋ ಆ ತೀರ್ಮಾನದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿ. ಈಗ ಗೋಮಾಳದ ಜಮೀನನ್ನೇ ಹೆಚ್ಚು ನಮ್ಮ ರೈತರು ಬಗರ್ ಹುಕುಂ ಸಾಗುವಳಿಯನ್ನು ಮಾಡಿರುವುದು. ಅರಣ್ಯ ಭೂಮಿಯನ್ನು ಬಗರ್ ಹುಕುಂ ಸಾಗುವಳಿಯನ್ನು ಮಾಡುವುದಕ್ಕೆ ಅವಕಾಶವೇ ಇಲ್ಲ. ಇನ್ನು ಹಳ್ಳಿಗಳಲ್ಲಿ ಬೇರೆ ಜಮೀನಿಲ್ಲ. ಅದಕ್ಕೋಸ್ಕರ ನೀವು ಮೇಲ್ಮನವಿಯನ್ನು ಸಲ್ಲಿಸಿ ತದನಂತರ ಏನಾದರೂ

ಒಂದು ಸಮಿತಿ ಮಾಡಿದರೆ ಆ ಸಮಿತಿಗೆ ಒಂದು ಅರ್ಥ ಬರುತ್ತದೆಯೇ ಹೊರತು ಅದನ್ನು ಬಿಟ್ಟು ಹಾಗೆಯೇ ಮಾಡಿದರೆ ಆ ಸಮಿತಿಗೆ ಕೆಲಸವೇ ಇಲ್ಲದಂತಾಗುತ್ತದೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಆರೂವರೆ ಸಾವಿರ ಅರ್ಜಿಗಳು ಬರೇ ಗೋಮಾಳದ ಮೇಲೆಯೇ ಇವೆ. ಸೊರಬ ತಾಲ್ಲೂಕಿನ ಒಂದು ಹಳ್ಳಿಯ ಯಾವುದೋ ಒಂದು ಡಿಸ್‌ಪ್ಯೂಟ್‌ನ್ನು ತೆಗೆದುಕೊಂಡು ಹೈಕೋರ್ಟ್ ಇಡೀ ರಾಜ್ಯಕ್ಕೇ ಅನ್ವಯಿಸುವ ಹಾಗೆ ಜಡ್ಜ್‌ಮೆಂಟ್ ಕೊಡುವಾಗ ನಮ್ಮ ಸರ್ಕಾರಿ ಅಡ್ವೊಕೇಟ್‌ಗಳು ಏನು ಮಾಡುತ್ತಿದ್ದರೋ ನಮಗೆ ಗೊತ್ತಿಲ್ಲ. ಏಕೆಂದರೆ ಈ ಸದನದಲ್ಲಿ ಅಮೆಂಡ್‌ಮೆಂಟ್ ಆಗಿ ಫಾರೆಸ್ಟ್ ಜಮೀನು ಅಲ್ಲದಂತಿರುವ ಎಲ್ಲಾ ಜಮೀನುಗಳನ್ನು ಬಗರ್‌ಹುಕುಂನಲ್ಲಿ ಮಂಜೂರು ಮಾಡಬಹುದು ಎಂದು ಹೇಳಿರುವಂಥ ಅಮೆಂಡ್‌ಮೆಂಟ್ ಆಗಿರುವಂಥದ್ದರ ನಕಲನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಇಡದೆ ಅವರು ನಮ್ಮ ತಲೆಯ ಮೇಲೆ ಚಪ್ಪಡಿ ಎಳೆದಿದ್ದಾರೆ. ಇಂಥ ಸಂದರ್ಭದಲ್ಲಿ ಸರ್ಕಾರ ರಕ್ಷಣೆಗೆ ಬರಬೇಕಾಗುತ್ತದೆ. ತಕ್ಷಣ ಇದನ್ನು ಮಾಡದಿದ್ದರೆ ಬಡವರು, ದುರ್ಬಲ ವರ್ಗದವರು, ದಲಿತರು ಮತ್ತು ಅಲ್ಲಿ ಗೋಮಾಳದಲ್ಲಿ ಸಾಗುವಳಿ ಮಾಡಿರತಕ್ಕಂಥವರಿಗೆ ಸಕ್ರಮ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ದಯವಿಟ್ಟು ಮೊದಲನೆಯ ಆದ್ಯತೆ ಕೊಟ್ಟು ಮಂತ್ರಿಗಳು ಕ್ರಮ ತೆಗೆದುಕೊಳ್ಳುವುದರ ಮೂಲಕ ಸರ್ಕಾರ ಮಧ್ಯೆ ಪ್ರವೇಶ ಮಾಡಬೇಕಾಗುತ್ತದೆ. ಅಧಿಕಾರಿಗಳನ್ನು ಕೂಡಿಸಿಕೊಂಡು ಒಂದು ಮೀಟಿಂಗ್ ಮಾಡಿ ಅಥವಾ ಏನು ಮಾಡಬೇಕು ಎಂಬ ಬಗ್ಗೆ ಅಥವಾ ಅವರು ಹೇಳಿದ ಹಾಗೆ ಕೋರ್ಟಿಗೆ ಮೇಲ್ಮನವಿಯನ್ನು ಸಲ್ಲಿಸಬೇಕೇ ಅಥವಾ ಇಲ್ಲಿರತಕ್ಕಂಥ ಬಿಲ್‌ನ್ನೇ ಅಮೆಂಡ್‌ಮೆಂಟ್ ಮಾಡಬೇಕೇ? ಒಟ್ಟಿನಲ್ಲಿ ಏನು ಮಾಡಬಹುದು ಎಂಬ ಬಗ್ಗೆ ದಯವಿಟ್ಟು ತಾವು ನೋಡಿ. ಏನಾದರೂ ಈ ಬಗ್ಗೆ ಮಾಡದಿದ್ದರೆ ಸಾಧ್ಯವಾಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಕುಮಾರ್ ಬಂಗಾರಪ್ಪ ನವರು ಪ್ರಮುಖವಾದ ಪ್ರಶ್ನೆಯೊಂದನ್ನು ಕೇಳಿದ್ದಾರೆ. ಇವರ ಜೊತೆಗೆ ಹಲವಾರು ಸದಸ್ಯರುಗಳೂ ಕೂಡ ಹಲವಾರು ಸ್ಪಷ್ಟೀಕರಣಗಳನ್ನು ಈ ಒಂದು ಪ್ರಶ್ನೆ ಮೇಲೆ ಕೇಳಿದ್ದಾರೆ. ಏಕೆಂದರೆ ಇದೊಂದು ಬಹಳ ಮಹತ್ವಪೂರಿತವಾದ ಪ್ರಶ್ನೆ. ನಮ್ಮ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಶನ್ ನಂಬರ್ 14048 : 2005, ದಿನಾಂಕ 22–9–2005 ರಂದು ಒಂದು ತೀರ್ಪು ಬಂತು. ಆ ಜಡ್ಜ್‌ಮೆಂಟ್ ಬಂದ ಮೇಲೆ ರಾಜ್ಯದಲ್ಲಿರತಕ್ಕಂಥ ಗೋಮಾಳದ ಜಮೀನುಗಳನ್ನು ಯಾವುದೇ ಒಂದು ಉದ್ದೇಶಕ್ಕಾಗಿ ಅದನ್ನು ಮಂಜೂರು ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳುವಂಥ ಒಂದು ತೀರ್ಪಿನ ಹಿನ್ನಲೆಯಲ್ಲಿ ಈಗಾಗಲೇ ಈ ಒಂದು ಸಮಸ್ಯೆ ಉದ್ಭವವಾಗಿರುವುದು ನಮ್ಮ ಮುಂದೆ ಇದೆ. ಹೀಗಾಗಿ ಆ ರೀತಿಯ ತೀರ್ಪು ಬರುವುದಕ್ಕೆ ಹಿನ್ನೆಲೆ ಇದೆ. ಇವೊತ್ತು ನಮ್ಮ ರಾಜ್ಯದಲ್ಲಿ ಗೋಮಾಳದ ಪ್ರದೇಶದ ವಿಸ್ತೀರ್ಣ ನಮ್ಮ ಚಾಖಲೆ ಪ್ರಕಾರ 22,83,189 ಎಕರೆ. ಆದರೆ ಇವೊತ್ತು ಎಲ್ಲಾ ಗೋಮಾಳ ಪ್ರದೇಶ ಅತಿಕ್ರಮಣ, ಮತ್ತೊಂದು ಎಂದು ಬೇರೆ ಬೇರೆಯದಕ್ಕೆ ಹೋಗಿ ಈಗ ನಮ್ಮ ಪೊಸೆಶನ್‌ನಲ್ಲಿ

ಇದ್ದಂಥದ್ದು ಕೇವಲ 7,35,287 ಎಕರೆ. ಇಷ್ಟು ಮಾತ್ರ ಇವೊತ್ತು ನಮ್ಮ ಕೈಯಲ್ಲಿದೆ. ಮೊದಲು ಇದ್ದದ್ದು 22 ಲಕ್ಷ ಚಿಲ್ಲರೆ ಎಕರೆ. ಆದರೆ ಇವೊತ್ತು ಈ ಲೆಕ್ಕಾಚಾರದ ಪ್ರಕಾರ ನೋಡಿದಾಗ ಕೇವಲ ಪ್ರತಿಶತ 32 ಗೋಮಾಳ ಪ್ರದೇಶ ಮಾತ್ರ ನಮ್ಮ ಕೈಯಲ್ಲಿದೆ. ನಿಜವಾಗಿ ಇವೊತ್ತು ಗೋಮಾಳ ಪ್ರದೇಶ ಎಷ್ಟು ಇರಬೇಕು ಎನ್ನುವ ಬಗ್ಗೆ ವೈಜ್ಞಾನಿಕವಾಗಿ ವಿಚಾರ ಮಾಡಿ ನೋಡಿದರೆ 75 ಲಕ್ಷ ಎಕರೆಗಿಂತ ಹೆಚ್ಚು ಭೂಮಿ ಇವೊತ್ತು ಇರಬೇಕಾಗಿತ್ತು. ಆದರೆ ಅಷ್ಟಿಲ್ಲ. ಕೇವಲ 7 ಲಕ್ಷದ ಎಕರೆ ಭೂಮಿ ಮಾತ್ರ ಇದೆ. ಇದು ಒಂದು ಹಿನ್ನೆಲೆ. ಇದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಹೈಕೋರ್ಟ್‌ನಲ್ಲಿ ರಿಟ್ ಪಿಟಿಶನ್ ಮೇಲೆ ಏನು ತೀರ್ಮಾನವಾಗಿದೆ, ಅದರ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರು ಕೇಳಿದರು, ಈ ರೀತಿಯ ತೀರ್ಪು ಇದ್ದಾಗ ಬಗರ್‌ಹುಕುಂ ಸಮಿತಿಯನ್ನು ಮಾಡಿದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಅದರಲ್ಲಿ ಅರ್ಥವಿದೆ. ಏಕೆಂದರೆ ಇವೊತ್ತು ಅಕ್ರಮ-ಸಕ್ರಮ ಮಾಡುವಂಥ ಸಮಿತಿ ಮುಂದೆ ಇರುವಂಥ ಅರ್ಜಿಗಳಲ್ಲಿ ಬಹುತೇಕ ಅರ್ಜಿಗಳಲ್ಲಿ ತೋರಿಸಿರುವ ಜಮೀನುಗಳು ಗೋಮಾಳ ಜಮೀನುಗಳೇ ಆಗಿವೆ. ನಮ್ಮ ಆರಗ ಜ್ಞಾನೇಂದ್ರರವರ ಕ್ಷೇತ್ರದಲ್ಲಿ ಸಮಿತಿ ಮುಂದೆ ಇರುವ ಅರ್ಜಿಗಳಲ್ಲಿ ಬಹುತೇಕ ಗೋಮಾಳ ಜಮೀನುಗಳೇ ಆಗಿವೆ. ಇಂಥ ಸಂದರ್ಭದಲ್ಲಿ ಯಾವ ರೀತಿಯ ನಿರ್ಣಯಗಳನ್ನು ತೆಗೆದುಕೊಳ್ಳಬೇಕೆಂದು ನಮ್ಮ ಮುಂದೆ ಪ್ರಶ್ನೆ ಇದೆ. ಹೀಗಾಗಿ ಈ ಒಂದು ತೀರ್ಪು, ಅದರ ಹಿನ್ನಲೆ, ಅದರ ಒಂದು ಅಧ್ಯಯನವನ್ನು ಮಾಡಿಕೊಂಡು ಆ ಪ್ರಕಾರ ನಾವು ಅಧ್ಯಯನವನ್ನು ಮಾಡಿದಾಗ ಅಲ್ಲಿ ಈ ಒಂದು ಲ್ಯಾಂಡ್‌ಗಳನ್ನು ಲ್ಯಾಂಡ್ ರೆವಿನ್ಯೂ ಆ್ಯಕ್ಟ್ ಪ್ರಕಾರ 94 ಎ, 94 ಬಿ ಮತ್ತು 94 ಸಿ ಸೆಕ್ಷನ್‌ಗಳ ಪ್ರಕಾರ ನಾವು ಈ ಜಮೀನುಗಳನ್ನು ನಾವು ಮಂಜೂರು ಮಾಡುತ್ತೇವೆ. ಅಕ್ರಮ ಸಕ್ರಮ ಸಮಿತಿಗಳಲ್ಲಿ ಈ ಲ್ಯಾಂಡ್‌ಗಳನ್ನು ಮಂಜೂರು ಮಾಡುತ್ತೇವೆ. ಆದರೆ ಆ ತೀರ್ಪನ್ನು ನಾವು ಅವಲೋಕನ ಮಾಡಿದಾಗ ಈ ಮೂರು ಸೆಕ್ಷನ್‌ಗಳ ಬಗ್ಗೆ 94 ಎ, 94 ಬಿ, 94 ಸಿ ಸೆಕ್ಷನ್‌ಗಳ ಬಗ್ಗೆ ಆ ತೀರ್ಪಿನಲ್ಲಿ ಎಲ್ಲೂ ಮೆನ್‌ಶನ್ ಮಾಡಿಲ್ಲ. ಮತ್ತು ಈ ಕಲಮುಗಳನ್ನು ಹೈಕೋರ್ಟ್‌ನವರು ರದ್ದು ಮಾಡಿಲ್ಲ. ಹೀಗಾಗಿ ನನ್ನ ಅಭಿಪ್ರಾಯದ ಪ್ರಕಾರ ಈ ಒಂದು ಕಲಮುಗಳನ್ನು ಅಲ್ಲಿ ಮೆನ್‌ಶನ್ ಮಾಡದೇ ಇರುವುದರಿಂದ, ಇದು ಅನ್ವಯವಾಗುವುದಿಲ್ಲವೆನ್ನುವಂಥ ಒಂದು ಅಭಿಪ್ರಾಯ ಕೂಡ ಇದೆ. ಆದಕಾರಣ ನಾನು ಇವುಗಳ ಬಗ್ಗೆ ನಾನು ಕಾನೂನು ಇಲಾಖೆಯ ಅಧಿಕಾರಿಗಳಿಂದ ಸ್ಪಷ್ಟೀಕರಣವನ್ನು ತೆಗೆದುಕೊಳ್ಳಲು ಸೂಚನೆಯನ್ನು ಈಗಾಗಲೇ ಕೊಟ್ಟಿದ್ದೇನೆ. ಈಗಾಗಲೇ ಏಪ್ರಿಲ್ ತಿಂಗಳಿನಲ್ಲಿ ಕಾನೂನು ಇಲಾಖೆಯ ಸಲಹೆಯನ್ನು ಪಡೆಯುವುದಕ್ಕಾಗಿ ಪತ್ರವನ್ನು ಬರೆದಿದ್ದೇನೆ. ಬಹುಶಃ ಅಲ್ಲಿಂದ ಪತ್ರ ಬಂದತಕ್ಷಣ ಮೊದಲನೆಯದಾಗಿ ಕಾನೂನು ತಿದ್ದುಪಡಿ ಬಗ್ಗೆ ಆಲೋಚನೆಯನ್ನು ಮಾಡಬಹುದು. ಇನ್ನೊಂದು ರಿವ್ಯೂ ಪಿಟಿಶನ್ ಫೈಲ್ ಮಾಡುವಂಥದ್ದರ ಬಗ್ಗೆ ಯೋಜನೆ ಮಾಡಬಹುದು. ಏಕೆಂದರೆ ಈ ಒಂದು ತೀರ್ಪಿನ ಹಿನ್ನೆಲೆಯಲ್ಲಿ ಇವೊತ್ತು ಸರ್ಕಾರಿ ಕೆಲಸಕ್ಕಾಗಲೀ ಅಥವಾ ಯಾವುದೇ ಒಂದು ಕೆಲಸಕ್ಕೆ ಗೋಮಾಳ ಜಮೀನನ್ನು ಮಂಜೂರು

ಮಾಡುವುದಕ್ಕೆ ಆಗುತ್ತಿಲ್ಲ. ಯಾವುದೇ ಒಂದು ಆಶ್ರಯ ಸಮಿತಿಗೂ ಲ್ಯಾಂಡ್ ಮಂಜೂರು ಮಾಡುವುದಕ್ಕೆ ಆಗುತ್ತಿಲ್ಲ. ಇದಲ್ಲದೇ ಬೇರೆ ಹಲವಾರು ಸಂಸ್ಥೆಗಳಿಗೂ ಭೂಮಿಯನ್ನು ಕೊಡುವುದಕ್ಕೆ ಆಗುತ್ತಿಲ್ಲ. ಇದರಿಂದಾಗಿ ಅಕ್ರಮ ಸಕ್ರಮ ಸಮಿತಿ ಮುಂದೆ ಬಂದ ಅರ್ಜಿಗಳನ್ನೂ ಕೂಡ ವಿಲೇವಾರಿ ಮಾಡುವುದಕ್ಕೆ ಆಗುತ್ತಿಲ್ಲ. ಆ ದೃಷ್ಟಿಯಿಂದ ಒಂದು ರಿವ್ಯೂ ಪಿಟಿಶನ್ ಫೈಲ್ ಮಾಡುವುದರ ಬಗ್ಗೆ ನಾವು ಆಲೋಚನೆಯನ್ನು ಮಾಡಿದ್ದೆವು. ಕೋರ್ಟ್ ತೀರ್ಪಿನಲ್ಲಿ ಈಗ ನಾನೇನು ಕಲಮುಗಳನ್ನು ಹೇಳಿದೆ ಅದು ಅನ್ವಯವಾಗದೇ ಇರುವುದರಿಂದ ಇದರ ಬಗ್ಗೆ ಸ್ಪಷ್ಟೀಕರಣವನ್ನು ಕೇಳಿ ನಾನು ಕಾನೂನು ಇಲಾಖೆಗೆ ಪತ್ರವನ್ನು ಬರೆದಿದ್ದೇನೆ. ಆ ಇಲಾಖೆಯಿಂದ ಪತ್ರ ಬಂದತಕ್ಷಣವೇ ಇದರ ಬಗ್ಗೆ ನಾನು ಕ್ರಮವನ್ನು ತೆಗೆದುಕೊಂಡು ಮುಂದೆ ಎಲ್ಲಾ ರೀತಿಯಾದಂಥ ವ್ಯವಸ್ಥೆಯನ್ನು ಮಾಡುವುದಕ್ಕೆ ನಾನು ತಯಾರಿದ್ದೇನೆ.

ಶ್ರೀ ಬಿ. ಶಿವಣ್ಣ : ಮಾನ್ಯ ಮಂತ್ರಿಗಳೇ, ಅಮೃತ್‌ಮಹಲ್ ಬಗ್ಗೆ ಏನು ಮಾಡುತ್ತೀರಿ ಎಂದು ಹೇಳಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಅಮೃತ್‌ಮಹಲ್ ಹುಲ್ಲುಗಾವಲು ಬಗ್ಗೆಯೂ ಯೋಚನೆ ಮಾಡಿದ್ದೇವೆ. ಗೋಮಾಳ, ಹುಲ್ಲುಗಾವಲು, ಅಮೃತ್‌ಮಹಲ್ ಎನ್ನುವಂಥದ್ದರ ಬಗ್ಗೆಯೂ ನಾವು ಆಲೋಚನೆಯನ್ನು ಮಾಡಿದ್ದೇನೆ. ಹುಲ್ಲುಗಾವಲಿನ ಬಗ್ಗೆಯೂ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಕುಮಾರ ಬಂಗಾರಪ್ಪ : ಮೇಲ್ಮನವಿಗೆ ಹೋಗುತ್ತೇವೆ ಎಂದು ಈಗ ತಾವೇನು ಹೇಳಿದಿರಿ ಇವತ್ತು ಯಾರಾ ಪರೂಬ್ಬರು ಪಬ್ಲಿಕ್ ಲಿಟಿಗೇಶನ್ ಹೋಗಿ, ನೀವು ಸುಪ್ರೀಂಕೋರ್ಟ್‌ಗೆ ಹೋದರೆ, ಸುಪ್ರೀಂಕೋರ್ಟ್‌ನವರು ನಿಮಗೆ ಒಪ್ಪಿಗೆ ಕೊಡುತ್ತಾರೆಯೇ? You tell me. ಈಗಾಗಲೇ ಸುಪ್ರೀಂಕೋರ್ಟ್‌ನವರು ಡೈರಕ್ಷನ್ ಕೊಟ್ಟಿದ್ದಾರೆ. ಈಗ ಆಶ್ರಯ ಸಮಿತಿಯಿಂದ ಮನೆಯಾಗಲಿ, ಮಂಜೂರು ಮಾಡುತ್ತೀರಿ. ಈಗ ಅವಕ್ಕೆ ರಿಜಿಸ್ಟ್ರೇಶನ್ ಆಗದ ಹೊರತು ನೀವು ಮನೆಯನ್ನು ಕೊಡುವುದಿಲ್ಲವೆಂದು ಹೇಳುತ್ತೀರಿ. ಮನೆ ಕೊಡುವುದೇ ಆಗಲಿ, ಆಸ್ತಿತ್ತೆ ಕಟ್ಟಿಸುವುದೇ ಆಗಲಿ ಅಥವಾ ಯಾವುದೇ ಒಂದು ಕೆಲಸವನ್ನು ನೀವು ಗೋಮಾಳ ಬಿಟ್ಟು, ರೆವಿನ್ಯೂ ಜಾಗವನ್ನು ಬಿಟ್ಟು ಬೇರೆ ಕಡೆಯಲ್ಲಿ ಮಾಡುವುದಕ್ಕೆ ನಿಮಗೆ ಸಾಧ್ಯವಾಗುತ್ತದೆಯೇ? ಈ ಜಾಗವನ್ನು ಬಿಟ್ಟು ಫಾರೆಸ್ಟ್ ಜಮೀನಿನಲ್ಲಿ ಮಾಡಲು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರಿಂದ ಜಮೀನು ರಿಲೀಸ್ ಮಾಡಿಸಿಕೊಳ್ಳಲು ನಿಮಗೆ ಸಾಧ್ಯವಾಗುತ್ತದೆಯೆ? ಆಗುವುದಿಲ್ಲ. ಮಾನ್ಯ ಅಧ್ಯಕ್ಷರ ಮೂಲಕ ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ ತಾವೇನು ಈಗ ಕಾನೂನು ಇಲಾಖೆ ಸಲಹೆ ಪಡೆದು ಮೇಲ್ಮನವಿಯನ್ನು ಹಾಕುತ್ತೇವೆಂದು ಹೊರಟಿದ್ದೀರೋ ಅದರ ಬದಲು, you bring a law. – ನೀವು ಕಾನೂನನ್ನು ಅಮೆಂಡ್‌ಮೆಂಟ್ ಮಾಡತಕ್ಕಂಥದ್ದು ಬಹಳ ಅವಶ್ಯಕತೆ ಇದೆ. ನೀವು ಹೇಳಿದ 94, ಎ, ಬಿ, ಸಿ ಕಲಂಗಳೆಲ್ಲವೂ ಬಗರ್ ಹುಕುಂಗೆ ಸೀಮಿತವಾಗಿರತಕ್ಕಂಥ ಕಾನೂನುಗಳಷ್ಟೇ ಹೊರತು ಆದರೆ ಆ ಜಡ್ಜ್‌ಮೆಂಟ್‌ನಲ್ಲಿ ಅವರು ಮೆನ್‌ಶನ್ ಮಾಡದೇ ಇದ್ದರೂ ಕೂಡ ಅಲ್ಲಿ ಒನ್ ಲೈನ್, ಲಾಸ್ಟ್‌ನಲ್ಲಿ ಏನು ಹೇಳಿದ್ದಾರೆಂದರೆ ಯಾವುದೇ ಗೋಮಾಳವನ್ನು ಮಂಜೂರಾತಿ ಮಾಡಬಾರದು ಎಂದು

ಇದೆ. ಯಾವುದೇ ಪರ್ಪಸ್‌ಗೂ, ಅದು ಮನೆ ಇರಬಹುದು, ಮತ್ತೊಂದು ಇರಬಹುದು, ಯಾವುದೇ ಉದ್ದೇಶಕ್ಕೂ ಗೋಮಾಳ ಜಮೀನು ಮಂಜೂರಾತಿ ಮಾಡಬಾರದು ಎಂದು ಇದೆ. Sections 94A, 94B, 94C are completely quashed.

ಹೀಗಾಗಿ ನಾನು ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳೇ, ಮೇಲ್ಮನವಿ ಹಾಕುವ ಬಗ್ಗೆ ತಾವು ಕಾನೂನು ಇಲಾಖೆಯಿಂದ ಕ್ಲಾರಿಫಿಕೇಶನ್ಸ್ ಪಡೆದುಕೊಳ್ಳಿ. ನಾನು ಅದಕ್ಕೆ ವಿರೋಧವೇನೂ ಮಾಡುವುದಿಲ್ಲ. ಆದರೆ ತಾವು ಮೇಲ್ಮನವಿಯನ್ನು ಮಾಡಿಕೊಳ್ಳುವುದಕ್ಕಷ್ಟೇ ತಾವೇನು ಯೋಚನೆ ಮಾಡುತ್ತಿದ್ದೀರಿ ಅದರಿಂದ ನಮಗೆ ತೊಂದರೆಯಾಗುತ್ತದೆ. ನೀವೇನು 15 ದಿವಸಗಳಲ್ಲಿ ಬಗರ್ ಹುಕುಂ ಸಮಿತಿಗೆ ಒಪ್ಪಿಗೆ ಕೊಟ್ಟು ಕೆಲಸವನ್ನು ಮಾಡಿಸಬೇಕು ಎಂದು ಇದ್ದೀರಿ ಮತ್ತು ಆ ಮೂಲಕ ವಿಲೇವಾರಿ ಮಾಡಬೇಕೆಂದಿದ್ದೀರಿ, ಅದು ಸಾಧ್ಯವಾಗುವುದಿಲ್ಲ. ಇದೇ ಅಸೆಂಬ್ಲಿಯಲ್ಲಿ ನೀವು ದಯಮಾಡಿ ಆ ಬಿಲ್‌ಗೆ ಅಮೆಂಡ್‌ಮೆಂಟ್ ತಂದು ಈ ಹೈಕೋರ್ಟ್ ಜಡ್ಜ್‌ಮೆಂಟ್ ಏನು ಬಂದಿದೆ, ಅದಕ್ಕೆ ಸೂಕ್ತವಾದ ವ್ಯವಸ್ಥೆಯನ್ನು ಮಾಡಿಕೊಳ್ಳುವುದು ಬಹಳ ಉತ್ತಮ ಇದೆ. ಈ ರೀತಿ ಮಾಡಬೇಕೆಂದು ನಾನು ಕಂದಾಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಕಂದಾಯ ಸಚಿವರೇ, ಇದೊಂದು ಬಹಳ ಪ್ರಮುಖವಾದ ಪ್ರಶ್ನೆಯಾಗಿದೆ. ನೀವು ಜಡ್ಜ್‌ಮೆಂಟಿಗಾಗಿಯೇ ಮೇಲ್ಮನವಿಯನ್ನು ಸಲ್ಲಿಸುವ ಬಗ್ಗೆ ಅಥವಾ ಬಿಲ್ ತರುವುದರ ಬಗ್ಗೆ ಯೋಚನೆ ಮಾಡಿ ಒಂದು ಖಚಿತ ನಿರ್ಧಾರಕ್ಕೆ ಬರಬೇಕಾಗಿತ್ತು. ಈಗಾಗಲೇ ತಡವಾಗಿದೆ. ಆದಕಾರಣ ತಾವು ವಿರೋಧ ಪಕ್ಷದ ನಾಯಕರನ್ನು ಹಾಗು ಇತರ ರಾಜಕೀಯ ಪಕ್ಷದ ನಾಯಕರ ಜೊತೆ ಸಮಾಲೋಚನೆ ಮಾಡಿ ಈ ಅವಿವೇಶನದಲ್ಲೇ ಸಾಧ್ಯವಾದರೆ ಈ ಬಗ್ಗೆ ಬಿಲ್ ತಂದು ಅಥವಾ ಮೇಲ್ಮನವಿ ಸಲ್ಲಿಸಿ ಕ್ರಮ ಕೈಗೊಳ್ಳಿ. ನೀವು ಆ ಕಮಿಟಿಗಳನ್ನು ಏನು ಮಾಡುತ್ತೀರಲ್ಲಾ, ಆ ಕಮಿಟಿಗಳನ್ನು ಮುಚ್ಚುವ ಅಗತ್ಯವೇ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ತಾವೇನು ಸಲಹೆಯನ್ನು ಕೊಟ್ಟಿದ್ದೀರಿ ಹಾಗೂ ಇನ್ನಿತರ ಸದಸ್ಯರುಗಳು ಸಲಹೆಗಳನ್ನೇನು ಕೊಟ್ಟಿದ್ದಾರೆ, ಅದನ್ನು ಅವಲೋಕನ ಮಾಡಿಕೊಂಡು ಎಲ್ಲಾ ಪಕ್ಷದ ನಾಯಕರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಇದಕ್ಕೆ ಏನು ಪರಿಹಾರವನ್ನು ಹುಡುಕಬೇಕೋ ಆ ಕೆಲಸವನ್ನು ನಾನು ಮಾಡುತ್ತೇನೆ. ಏಕೆಂದರೆ ಸರ್ಕಾರ ಇದರ ಪರವಾಗಿದೆ. ಇದರ ಬಗ್ಗೆ ಸರ್ಕಾರ ಪರವಾಗಿದೆಯಾದ ಕಾರಣ ಇದಕ್ಕೆ ಒಂದು ಪರಿಹಾರವನ್ನು ಹುಡುಕುವ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತೇನೆ. ಈ ಸದನದಲ್ಲಿಯೇ ಅದನ್ನು ತರುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಶಂಕರಲಿಂಗೇಗೌಡರ ಪ್ರಶ್ನೆ ಇದೆ.

(ಮಾನ್ಯ ಸದಸ್ಯರಾದ ಶಂಕರಲಿಂಗೇಗೌಡರು ಹಾಜಿರಲಿಲ್ಲ)

(ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿಯಲ್ಲಿ ಸೇರಿಸಲಾಗಿದೆ.)